# ಕರ್ನಾಟಕ ಸರ್ಕಾರ
## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.
**ಸಿ.ಸಿ.ನಂ.884/2014**

**ಪಿ.ಡಬ್ಲ್ಯೂ: 21**
**ಸಿ.ಡಬ್ಲ್ಯೂ: 22**

**ಸಾಕ್ಷಿದಾರರ ಹೆಸರು** : ಏಜಾಸ್ ಸಾಬ್
**ತಂದೆಯ ಹೆಸರು** : ಮಹಮ್ಮದ್ ಸಾಬ್
**ವಯಸ್ಸು** : **45 ವರ್ಷ**
**ಉದ್ಯೋಗ** : ಆಟೋ ಚಾಲಕ
**ವಾಸಸ್ಥಳ** : ಬಾವಿಕೆರೆ

**ದಿನಾಂಕ: 09-11-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಿ: ಡಬ್ಲ್ಯು **21** ರವರು ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಾಗಿರುತ್ತಾರೆ

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ದಿ:**03-10-2013** ರಂದು ನಾನು ಬಾವಿಕೆರೆಯಲ್ಲಿ ಆಟೋ ಚಲಾಯಿಸಿಕೊಂಡು ಹೋಗುವಾಗ ಪೋಲೀಸರು ಕರೆದು ಮಹಜರಿಗೆ ಸಹಿ ಮಾಡಲು ತಿಳಿಸಿದ್ದು, ನಾನು ಸಹಿ ಮಾಡಿರುತ್ತೇನೆ. ನಿಪಿ-**9** ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-**9(ಕೆ)** ಎಂದು ಗುರುತಿಸಲಾಯ್ತು. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿ:**03-10-2013** ರಂದು ಬಾವಿಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಪೋಲೀಸರು ಹಾಗೂ ಬ್ಯಾಂಕಿನ ಮ್ಯಾನೇಜರ್ ರವರ ಸಮಕ್ಷಮ ಚಾಸಾ-**20** ರವರು ಬಂಗಾರದ ಆಭರಣಗಳನ್ನು ಪರೀಕ್ಷೆ ಮಾಡಿ ನೀಡಿದ ವರದಿಗೆ ಸಂಬಂದಿಸಿದಂತೆ ಪೋಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ **9** ಚೀಲಗಳಲ್ಲಿಳಿದ್ದ ಆಭರಣಗಳನ್ನು ಪರೀಕ್ಷಿಸಿದಾಗ ಅವು ಬಂಗಾರದ ಆಭರಣಗಳು ಅಲ್ಲ ಎಂದು ತಿಳಿದಿರುತ್ತದೆಂದರೆ ನನಗೆ ಗೊತ್ತಿಲ್ಲ. ಮಹಜರ್ ಕಾಲಕ್ಕೆ **7, 8** ಜನರು ಇದ್ದೆವೆಂದರೆ ಸರಿಯಲ್ಲ. ಚಾಸಾ-**20** ರವರು ಬ್ಯಾಂಕಿನ ಆಭರಣಗಳನ್ನು ಪರೀಕ್ಷಿಸಿ ವರದಿ ನೀಡಿರುತ್ತಾರೆಂದರೆ ಸರಿಯಲ್ಲ. ಅದಕ್ಕೆ ನಾನು ಸಹಿ ಮಾಡಿರುತ್ತೇನೆಂದರೆ ಸಾಕ್ಷಿಯು ನಾನು ಪೋಲೀಸರು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆಂದು ನುಡಿಯುತ್ತಾರೆ. ನನ್ನ ಸಮಕ್ಷಮ ಮಹಜರ್ ಮಾಡಿ ಚಾಸಾ-**20** ರವರು ವರದಿ ನೀಡಿರುವ ಬಗ್ಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎಂ ಕೆ ಟಿ **ವಕೀಲರಿಂದ.**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ: ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-
***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***